**ಎಸ್.ಜೆ.ಎಂ ವಿಶ್ವವಿದ್ಯಾಲಯ - ಸ್ಕೂಲ್ ಆಫ್ ಡೆಂಟಿಸ್ಟ್ರಿ, ರಾಜೀವ್ ಗಾಂಧಿ ವಿಶ್ವವಿದ್ಯಾಲಯ ಅಡಿಯಲ್ಲಿ ಮತ್ತು ಎನ್.ಎಸ್.ಎಸ್ ಘಟಕದಿಂದ ವಿಶ್ವ ಬೈಸಿಕಲ್ ದಿನಾಚರಣೆ ಹಾಗೂ ಜಾಗೃತಿ ಜಾಥಾ**

ಜೂನ್ 3, 2026: ಜಾಗತಿಕ ವಿಶ್ವ ಬೈಸಿಕಲ್ ದಿನಾಚರಣೆಯ ಅಂಗವಾಗಿ, ಸ್ಕೂಲ್ ಆಫ್ ಡೆಂಟಿಸ್ಟ್ರಿ "ಹಸಿರು ಭವಿಷ್ಯಕ್ಕಾಗಿ ಸೈಕ್ಲಿಂಗ್" ಎಂಬ ಘೋಷವಾಕ್ಯದೊಂದಿಗೆ ಬೃಹತ್ ಸೈಕ್ಲೋಥಾನ್ ಹಮ್ಮಿಕೊಳ್ಳಲಾಗಿತ್ತು. ದೈನಂದಿನ ಜೀವನದಲ್ಲಿ ಸೈಕಲ್ ಬಳಸುವುದರಿಂದ ಸಿಗುವ ದೈಹಿಕ ಪ್ರಯೋಜನಗಳು, ಹೃದಯದ ಆರೋಗ್ಯ ಮತ್ತು ಪರಿಸರ ಸಂರಕ್ಷಣೆಯ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು.

ಈ ಕಾರ್ಯಕ್ರಮವು ಬೆಳಗ್ಗೆ 8:30ಕ್ಕೆ ಕಾಲೇಜಿನ ಮುಖ್ಯ ಆವರಣದಲ್ಲಿ ಚಾಲನೆ ನೀಡಲಾಯಿತು. ಈ ಸೈಕ್ಲೋಥಾನ್ ನಗರದ ಪ್ರಮುಖ ರಸ್ತೆಗಳು, ಗಾಂಧಿ ವೃತ್ತ, ಅಂಬೇಡ್ಕರ್ ವೃತ್ತ, ಮದಕರಿ ನಾಯಕ ವೃತ್ತಗಳ ಮೂಲಕ ಸುಮಾರು 5 ಕಿಲೋಮೀಟರ್ ದೂರ ಸಾಗಿತು.

ಸೈಕ್ಲೋಥಾನ್‌ನಲ್ಲಿ ಸಂಸ್ಥೆಯ ಪ್ರಾಂಶುಪಾಲರಾದ ಡಾ. ರಘುನಾಥ ರೆಡ್ಡಿ ಎಂ. ಎಚ್., ಉಪಪ್ರಾಂಶುಪಾಲರಾದ ಡಾ. ಹರಣಿ ಟಿ. ಸಿ, ವಿವಿಧ ವಿಭಾಗದ ಮುಖ್ಯಸ್ಥರಾದ ಡಾ. ಕೋದಂಡರಾಮ ಜಿ. ಎಸ್., ಡಾ. ಜಯಚಂದ್ರ ಎಂ ಜಿ, ಡಾ. ಮುಜೀಬ್ , ಡಾ. ದೀಪ, ಎನ್.ಎಸ್.ಎಸ್ ನೋಡಲ್ ಅಧಿಕಾರಿ ಡಾ. ಗಜಾಲಾ ಸುಲ್ತಾನ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಸುಮಾರು 50 ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.

ಈ ಜಾಥಾದುದ್ದಕ್ಕೂ ವಿದ್ಯಾರ್ಥಿಗಳು "ಹಸಿರು ಭವಿಷ್ಯಕ್ಕಾಗಿ ಸೈಕಲ್ ಸವಾರಿ", "ಸೈಕಲ್ ಸವಾರಿ ಮಾಡಿ - ಉತ್ತಮ ಆರೋಗ್ಯ ನಿಮ್ಮದಾಗಿಸಿ, "ಇಂಧನ ಉಳಿಸಿ - ಪರಿಸರ ಮಾಲಿನ್ಯ ಮುಕ್ತವಾಗಿಸಿ", "ದಿನವೂ ತುಳಿಯಿರಿ ಸೈಕಲ್ - ದೂರವಾಗುವುದು ಕಾಯಿಲೆಗಳ ಸರ್ಕಲ್" ಎನ್ನುವ ವಿವಿಧ ಘೋಷಣೆಗಳಿರುವ ಆಕರ್ಷಕ ಫಲಕಗಳನ್ನು ಪ್ರದರ್ಶಿಸುವ ಮೂಲಕ ಸಾರ್ವಜನಿಕರ ಗಮನ ಸೆಳೆದರು.

ಒಟ್ಟಾರೆಯಾಗಿ, ಸ್ಕೂಲ್ ಆಫ್ ಡೆಂಟಿಸ್ಟ್ರಿ ಹಾಗೂ ಎನ್.ಎಸ್.ಎಸ್ ಘಟಕದ ಈ ಜಂಟಿ ಪ್ರಯತ್ನವು ಸಾರ್ವಜನಿಕರಲ್ಲಿ ಪರಿಸರ ಪ್ರಜ್ಞೆ ಮತ್ತು ಆರೋಗ್ಯಕರ ಜೀವನಶೈಲಿಯ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಸಂಪೂರ್ಣ ಯಶಸ್ವಿಯಾಯಿತು.


SJM DENTAL COLLEGE & HOSPITAL
GPS Map Camera
Chitradurga,Karnataka,India
BD Road, Iyyanna Pet, Chitradurga, Karnataka 577501, India
Lat 14.224285, Long 76.401432
Wednesday, 03/06/2026 10:43 AM GMT+05:30
Note : Captured by GPS Map Camera


ಇಂಧನ ಉಳಿಸಿ, ಸೈಕಲ್ ತುಳಿಸಿ